ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್‌ಅರುಣ್‌ರವರು
ನಿಯಮ 72ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ

ಪ್ರಶ್ನೆ: ತೀರ್ಥಹಳ್ಳಿ ತಾ. ಕಸಬಾ ಹೋಬಳಿ ಸುರುಳಿಬಾಳೆಬೈಲು ಗ್ರಾಮದ ಸರ್ವೆ ನಂ 68 ಸರ್ಕಾರದ ವಸತಿ ಉದ್ದೇಶದ ಉಚಿತ ನಿವೇಶನದ ಹಕ್ಕುಪತ್ರ ಸಂಖ್ಯೆ: MC-1869/72/73 ಹೊಂದಿರುವ ಇಂದಿರಾನಗರದಲ್ಲಿ ಸರ್ಕಾರದ ಯಾವುದೇ ಪ್ರಾಧಿಕಾರದ ಅನುಮತಿ ಪಡೆಯದೇ ಕಾನೂನು ಬಾಹಿರವಾಗಿ ಅಕ್ರಮವಾಗಿ, ಅನಧಿಕೃತವಾಗಿ ನಕಲಿ ಫೋರ್ಜರಿ ಕಟ್ಟಡದ ಲೈಸೆನ್ಸ್ ಹಾಗೂ ಫೋರ್ಜರಿ ದಾಖಲೆಗಳನ್ನು ಬಳಸಿಕೊಂಡು ಮಸೀದಿ, ಮದರಸ ನಡೆಸುತ್ತಿರುವ ಮುಸ್ಲಿಂ ಎಜುಕೇಶನ್ ಸೊಸೈಟಿ (ರಿ), ಇಂದಿರಾನಗರ ತೀರ್ಥಹಳ್ಳಿ ಹಾಗೂ ಬೆಂಗಳೂರು ನಗರದ ನಿವೇಶನ ನಂ 43 ಮಸ್ಜಿದ್ ಈ ಅಶ್ರಫಿ ಲತೀಫ್ ವೆಲ್ಫೇರ್ ಟ್ರಾಸ್ಟ್, 38ನೇ ಅಡ್ಡರಸ್ತೆ, 19 ನೇ ಮುಖ್ಯರಸ್ತೆ, 5ನೇ ಸ್ಟಾರ್, ಹೆಚ್‌ಬಿಆರ್ ಲೇಔಟ್, ವಾರ್ಡ್ ನಂ 24, ಬೆಂಗಳೂರು-43 ಇಲ್ಲಿಯೂ ಸಹ ವಾಸದ ಉದ್ದೇಶಕ್ಕಾಗಿ ನೀಡಿರುವ ನಿವೇಶನ ಜಾಗದಲ್ಲಿ ಅಕ್ರಮವಾಗಿ ಅನಧಿಕೃತವಾಗಿ ಧಾರ್ಮಿಕ ಚಟುವಟಿಕೆಗೆ ಬಳಕೆ ಮಾಡುವುದರಿಂದ (ಮಸೀದಿಯ ಮತ್ತು ಮದರಸದ ಚಟುವಟಿಕೆಗಳನ್ನು ನಿತ್ಯ 50 ರಿಂದ 60 ಜನರು ಸೇರಿ ಪ್ರಾರ್ಥನೆ ಮಾಡುತ್ತಾ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು) ಸುತ್ತಮುತ್ತಲಿನ ಅನ್ಯಧರ್ಮದವರಿಗೆ ಹಾಗೂ ಭಾವನೆಗೆ ತೊಂದರೆ ಉಂಟಾಗುವ ಮತ್ತು ಕೋಮು ಗಲಭೆಗೆ ಅವಕಾಶ ನೀಡಲಾಗುತ್ತಿದ್ದು, ಇದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವುದರಿಂದ ಅಕ್ರಮವಾಗಿ ನಿರ್ಮಿಸಿರುವ ಧಾರ್ಮಿಕ ಕಟ್ಟಡವನ್ನು ತೆರವುಗೊಳಿಸುವ ಕುರಿತು.

ಉತ್ತರ:ಶಿವಮೊಗ್ಗ ಜಿಲ್ಲೆಯ ವರದಿ

ತೀರ್ಥಹಳ್ಳಿ ತಾ. ಕಸಬಾ ಹೋಬಳಿ ಸುರುಳಿ ಬಾಳೆಬೈಲು ಗ್ರಾಮದ ಸರ್ವೆ ನಂ 68 ಸರ್ಕಾರದ ವಸತಿ ಉದ್ದೇಶದ ಉಚಿತ ನಿವೇಶನದ ಹಕ್ಕುಪತ್ರ ಸಂಖ್ಯೆ MC-1869/72/73 ಹೊಂದಿರುವ ಇಂದಿರಾನಗರದಲ್ಲಿ ಸರ್ಕಾರದ ಯಾವುದೇ ಪ್ರಾಧಿಕಾರದ ಅನುಮತಿ ಪಡೆಯದೇ ಕಾನೂನು ಬಾಹಿರವಾಗಿ ಅಕ್ರಮವಾಗಿ, ಅನಧಿಕೃತವಾಗಿ ನಕಲಿ ಫೋರ್ಜರಿ ಕಟ್ಟಡದ ಲೈಸೆನ್ಸ್ ಹಾಗೂ ಫೋರ್ಜರಿ ದಾಖಲೆಗಳನ್ನು ಬಳಸಿಕೊಂಡು ಮಸೀದಿ, ಮದರಸ ನಡೆಸುತ್ತಿರುವ ಮುಸ್ಲಿಂ ಎಜುಕೇಶನ್ ಸೊಸೈಟಿ (ರಿ), ಇಂದಿರಾನಗರ, ತೀರ್ಥಹಳ್ಳಿ ಇಲ್ಲಿ ವಾಸದ ಉದ್ದೇಶಕ್ಕಾಗಿ ನೀಡಿರುವ ನಿವೇಶನ ಜಾಗದಲ್ಲಿ ಅಕ್ರಮವಾಗಿ ಅನಧಿಕೃತವಾಗಿ ಧಾರ್ಮಿಕ ಚಟುವಟಿಕೆ ನಡೆಸುತ್ತಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ, ಗ್ರಾಮಸ್ಥರಾದ ಶ್ರೀ ಸತೀಶ್ ಬಿನ್ ಸೋಮಪ್ಪ ಮತ್ತು ಸಂತೋಷ್ ಇವರು ದೂರು ಅರ್ಜಿಗಳನ್ನು ಸಲ್ಲಿಸಿದ್ದು, ಈ ಬಗ್ಗೆ ಪೊಲೀಸ್ ಇಲಾಖಾ ಅಧಿಕಾರಿಗಳೊಂದಿಗೆ ತಹಸೀಲ್ದಾರ್ ತೀರ್ಥಹಳ್ಳಿ, ಇ.ಓ ತೀರ್ಥಹಳ್ಳಿ ರವರು ಸ್ಥಳ ಪರಿಶೀಲನೆ ನಡೆಸಿರುತ್ತಾರೆ.

ಮೆಸ್ಕಾಂ ಕಛೇರಿಯಿಂದ ದಾಖಲಾತಿ ಪಡೆದುಕೊಂಡಿದ್ದು, ಸದರಿ ಕಟ್ಟಡವು ಮುಸ್ಲಿಂ ಎಜುಕೇಷನ್ ಸೊಸೈಟಿ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಪಡೆದುಕೊಂಡಿರುತ್ತದೆ. ಮುಳುಬಾಗಿಲು ಗ್ರಾಮ ಪಂಚಾಯತಿ ಕಡೆಯಿಂದ ದಾಖಲಾತಿ ಪಡೆದುಕೊಂಡಿದ್ದು, ಮದರಸ ನಡೆಸುತ್ತಿರುವ ಬಗ್ಗೆ ಗ್ರಾಮ ಪಂಚಾಯತಿಯಿಂದ ಯಾವುದೇ ಎನ್.ಓ.ಸಿ ಪಡೆದ ಬಗ್ಗೆ ದಾಖಲಾತಿಗಳು ಲಭ್ಯವಿರುವುದಿಲ್ಲ ಎಂದು ಮಾಹಿತಿ ನೀಡಿರುತ್ತಾರೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ಸದರಿ ಮದರಸ ನಡೆಸುವ ಬಗ್ಗೆ ತಮ್ಮ ಇಲಾಖೆಯಿಂದ ಎನ್.ಓ.ಸಿ ನೀಡುವುದಿಲ್ಲ ಮತ್ತು ಈ ಬಗ್ಗೆ ಎನ್.ಓ.ಸಿ.ಯನ್ನು ವಕ್ಫ್ ಬೋರ್ಡಿನಿಂದ ನೀಡುತ್ತಾರೆಂದು ತಿಳಿಸಿರುತ್ತಾರೆ.

ಮುಸ್ಲಿಂ ಎಜುಕೇಷನ್ ಸೊಸೈಟಿಯವರು ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ 6266/2023 ರೀತ್ಯಾ ಅರ್ಜಿ ಸಲ್ಲಿಸಿ, TO QUASH THE NOTICE/ORDER DTD 03.03.2023 BY THE RESPONDENT GRAMA PANCHAUYATH VIDE NO. MU.GRA.PAM.NO.77/2022-23 (ANNEXURE-A) ಮುಂದೆ ತಿಳಿಸಿರುವ ಪರಿಹಾರ ಕೋರಿದ್ದಾರೆ.

DIRECT DECLARING THAT THE IMPUGNED NOTICE/ORDER DTD 03.03.2023 BY THE RESPONDENT GRAMAPANCHAYATH VIDE NO. MU.GRA.PAM.NO. 77/2022-23 VIDE ANNEXURE-A IS HIGHLY ARBITRARY, ILLEGAL AND WITHOUT AUTHORITY OF LAW

GRANT AN INTERIM ORDER TO STAY THE OPERATION AND EXECUTION OF NOTICE/ORDER VIDE NO. MU.GRA.PAM.NO.77/2022-23 DTD 03.03.2023 ISSUED BY THE RESPONDENT WHICH IS PRODUCED AT ANNEXURE-A AND ALL THE FURTHER PROCEEDINGS PURSUANT TO THEREOF UNTIL DISPOSAL OF THE WP."

ಸದರಿ ರಿಟ್ ಪಿಟಿಷನ್‌ನ ಮುಂದಿನ ವಿಚಾರಣಾ ದಿನಾಂಕ: 13.12.2023 ರಂದು ಇರುತ್ತದೆ. ಸದರಿ ವಿಷಯವನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ರೀತ್ಯಾ ವಿಲೇಗೊಳಿಸಲಾಗುವುದು.

**ಬೆಂಗಳೂರು ನಗರ ರವರ ವರದಿ:**

ಬೆಂಗಳೂರು ನಗರದ ನಿವೇಶನ ನಂ 43 ಮಸ್ಜಿದ್ ಈ ಅಶ್ರಫಿ ಲತೀಫ್ ವೆಲ್ಫೇರ್ ಟ್ರಾಸ್ಟ್, 38ನೇ ಅಡ್ಡರಸ್ತೆ, 10 ನೇ ಮುಖ್ಯರಸ್ತೆ, 5ನೇ ಬ್ಲಾಕ್, ಹೆಚ್‌ಬಿಆರ್ ಲೇಔಟ್, ವಾರ್ಡ್ ನಂ 24, ಬೆಂಗಳೂರಿನಲ್ಲಿ ಇ-ಅಶ್ರಫಿ ಲತೀಫ್ ವೆಲ್ವೇರ್ ಅಧ್ಯಕ್ಷ ಮುಷ್ತಾಕ್ ಅಹ್ಮದ್‌ರವರ ನೇತೃತ್ವದಲ್ಲಿ ಮಸೀದಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ಶ್ರೀ ಸ್ವಾಮ್ ಫಿಲೀಫ್ ಮತ್ತು ಹೆಚ್.ಬಿ.ಆರ್. ಲೇಔಟ್ ನಿವಾಸಿಗಳು ಬಿ.ಬಿ.ಎಂ.ಪಿ. ಅಧಿಕಾರಿಗಳನ್ನು ಎದುರುದಾರರನ್ನಾಗಿ ಮಾಡಿ, ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ನಂ.8753/2020 ರಂದು ಅರ್ಜಿ ಸಲ್ಲಿಸಿರುತ್ತಾರೆ.

ಮಾನ್ಯ ಉಚ್ಚ ನ್ಯಾಯಾಲಯವು ಆಯುಕ್ತರು, ಬಿಬಿಎಂಪಿ ಬೆಂಗಳೂರು ರವರಿಗೆ ನೋಟೀಸ್ ನೀಡಿ ವರದಿ ಕೇಳಿದ್ದರ ಮೇರೆಗೆ ಬಿಬಿಎಂಪಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ದಿನಾಂಕ: 21.08.2021 ರಂದು ಸದರಿ ಟ್ರಸ್ಟ್‌ನವರು ಸದರಿ ಸ್ಥಳದಲ್ಲಿ ಮನೆಯನ್ನು ನಿರ್ಮಿಸಲು ಬಿಬಿಎಂಪಿ ಯಿಂದ ಪ್ಲಾನಿಂಗ್ ಪರ್ಮಿಷನ್ ಪಡೆದುಕೊಂಡಿರುವುದಾಗಿ ನ್ಯಾಯಾಲಯಕ್ಕೆ ವರದಿ ನೀಡಿರುತ್ತಾರೆ.

ಸ್ಥಳದಲ್ಲಿ ಮಸೀದಿ ರೀತಿಯಲ್ಲಿ ಕಟ್ಟಡ ನಿರ್ಮಿಸಲು ಪ್ರಾರಂಭ ಮಾಡಿದ್ದರಿಂದ ಅರ್ಜಿದಾರರು ಆಕ್ಷೇಪ ವ್ಯಕ್ತಪಡಿಸಿ, ಬಿಬಿಎಂಪಿ ಆಯುಕ್ತರು ಮತ್ತು ಹೆಚ್‌ಬಿಆರ್ ಲೇಔಟ್‌ನ ಬಿಬಿಎಂಪಿ ಎಕ್ಸ್‌ಕ್ಯೂಟಿವ್ ಇಂಜಿನಿಯರ್ ರವರುಗಳ ವಿರುದ್ಧ ನ್ಯಾಯಾಲಯದ ಆದೇಶ ಉಲ್ಲಂಘನೆ ಮಾಡಿದ್ದಾರೆಂದು ಮತ್ತೊಮ್ಮೆ ಸಿಸಿಸಿ ನಂ. 167/2022 ರಂದು ಮಾನ್ಯ ಉಚ್ಛ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ದಿನಾಂಕ: 21.09.2021 ರಂದು ಮಾನ್ಯ ನ್ಯಾಯಾಲಯವು ವಿಚಾರಣೆ ನಡೆಸಿ, ಸ್ಥಳದಲ್ಲಿ ಪ್ಲಾನಿಂಗ್‌ಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದ್ದರ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ಅದನ್ನು ಕೆಡವಿ ಹಾಕುವಂತೆ ಬಿಬಿಎಂಪಿ ರವರಿಗೆ ಆದೇಶ ಮಾಡಿದ್ದರ ಮೇರೆಗೆ ಸದರಿ ಬಿಬಿಎಂಪಿ ರವರು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡ ನಿರ್ಮಾಣ ಮಾಡುತ್ತಿರುವ ಟ್ರಸ್ಟ್‌ರವರಿಗೆ ನೋಟೀಸ್ ಜಾರಿ ಮಾಡಿ ಕಾಮಗಾರಿಗೆ ತಡೆವೊಡ್ಡಿರುತ್ತಾರೆ.

ಈ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಗುಪ್ತವಾರ್ತೆಯ ನಿರ್ದೇಶಕರು ರವರಿಂದ ಸ್ವೀಕರಿಸಲಾದ ವಿಶೇಷ ವರದಿಯ ಆಧಾರದ ಮೇರೆಗೆ ಪಿ.ಐ. ಹೆಣ್ಣೂರು ಪೊಲೀಸ್ ಠಾಣೆ ರವರು ಖುದ್ದು ಸ್ಥಳಕ್ಕೆ ಹಾಜರಾಗಿ ಸ್ಥಳ ಪರಿಶೀಲನೆ ನಡೆಸಿ, ಸದರಿ ಸ್ಥಳದಲ್ಲಿ ಈಗಾಗಲೇ ಕಟ್ಟಡ ನಿರ್ಮಾಣ ಕಾರ್ಯ ಸ್ಥಗಿತಗೊಂಡಿದ್ದು ಹಾಗೂ ಯಾವುದೇ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ.

---

**ಹೆಚ್‌ಡಿ 521 ಎಸ್‌ಎಸ್‌ಟಿ 2023**

(ಡಾ॥ ಜಿ.ಪರಮೇಶ್ವರ)
ಗೃಹ ಸಚಿವರು